ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ :ಸಿಆಸುಇ:42:ಆರ್.ಟಿ.ಐ:2013

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ :28.02.2013

ಅನಧಿಕೃತ ಟಿಪ್ಪಣಿ

ವಿಷಯ: ಮಾಹಿತಿ ಹಕ್ಕು ಅಧಿನಿಯಮದಡಿ ವಿಳಂಬವಿಲ್ಲದಂತೆ, ಮಾಹಿತಿ ಒದಗಿಸುವ ಬಗ್ಗೆ

ಉಲೇಖ: ಕ.ಮಾ.ಆಯೋಗದ ಆದೇಶ ಸಂಖ್ಯೆ:KIC9075C/W9078 PTN2011, ದಿ:28/01/2013.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡುವಾಗ ಹಿಂದಿನ ಅಧಿಕಾರಿಗಳು ಮುಂದೆ ಬರುವ ಅಧಿಕಾರಿಗಳಿಗೆ ಸೂಕ್ತ ಸಮಯದಲ್ಲಿ ದಾಖಲಾತಿಗಳ ನಿರ್ವಹಣೆ ಹಾಗೂ ಹಸ್ತಾಂತರಿಸದೆ ಇದ್ದ ಕಾರಣ ಸಂಬಂಧಪಟ್ಟ ಮಾಹಿತಿ ನೀಡುವಲ್ಲಿ ಲೋಪವಾಗಿರುವುದು ಕರ್ನಾಟಕ ಮಾಹಿತಿ ಆಯೋಗದ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ಉಲ್ಲೇಖಿತ ಮಾಹಿತಿ ಆಯೋಗದ ಆದೇಶದನ್ವಯ ಅಧಿಕಾರಿಗಳ ಬದಲಾವಣೆಯಾದ ಸಂದರ್ಭದಲ್ಲಿ ನಂತರ ಬರುವ ಅಧಿಕಾರಿಗಳಿಗೆ ಸಂಬಂಧಪಟ್ಟ ದಾಖಲಾತಿಗಳ ಹಸ್ತಾಂತರವನ್ನು ನಿಯಮಿತವಾಗಿ ಸೂಕ್ತ ಸಮಯದಲ್ಲಿ ನೀಡಿ ಮಾಹಿತಿ ನೀಡುವಿಕೆಯಲ್ಲಿ ಉಂಟಾಗುವ ವಿಳಂಬವನ್ನು ತಪ್ಪಿಸಬಹುದೆಂದು ಈ ಮೂಲಕ ತಿಳಿಸಲಾಗಿದೆ.

ಲ. ವೆಂಕಟಗಿರಿಯಪ್ಪ 28/2/13
(ಲ.ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಇವರಿಗೆ,
ಎಲ್ಲಾ ಸಚಿವರ ಆಪ್ತ
ಕಾರ್ಯದರ್ಶಿಗಳು.

D:\Office work\Right to Information Act-2013\RTI-U O Note.doc